ಹುಟ್ಟಲಿಲ್ಲವಲ್ಲ ಎಂದು ಈಗ ಆಶ್ಚರ್ಯ ಎನಿಸುತ್ತದೆ. ಮಂಚದ ಮೇಲೆ ಮಂಡಿಯೂರಿ ಮುಂದೆ ಬಗ್ಗಿ ಎಡಗೈಯಿಂದ ಅವಳ ಬಾಯಿ ಒತ್ತಿ ಹಿಡಿದು, ಚಾದರ ಕಿತ್ತೆಸೆದು ತನ್ನ ಕಾಲಿನಿಂದ ಅವಳ ಎರಡೂ ಕಾಲುಗಳನ್ನು ಅಮುಕಿ ದೇಹದ ಮೇಲೆ ಆಕ್ರಮಣಗೈದ. ಅವಳಿಗೆ ಎಚ್ಚರವಾಗಿ ಏನಾಗುತ್ತಿದೆ ಎಂದು ತಿಳಿಯುವವರೆಗೂ ಒದ್ದಾಡಿದಳು. ನಂತರ ಒಡ್ಡಿಕೊಂಡಳು. ಅವಳು ತೆಪ್ಪಗಾದಾಗ ಉತ್ಸಾಹವೆಲ್ಲ ಜರ್ರನೆ ಇಳಿದ ಹಾಗಾಯಿತು. ಏನೋ ಉದಾಸೀನ. ಆದರೂ ಮುಂದಿನದೆಲ್ಲ ಕ್ಷಣಗಳಲ್ಲಿ ನಡೆದುಹೋದ ಭಾಸ. ಏನೂ ತೋಚದೇ ಬೇಗ ಬೇಗ ಮುಗಿಸಿ ರೂಮು ಸೇರಿ ಗಾಢ ನಿದ್ದೆ ಮಾಡಿದ.

ಆಮೇಲೆ ಒಂದಷ್ಟು ದಿವಸ ಯಾವುದರ ಬಗ್ಗೆಯೂ ತಲೆಕೆಡಿಸಿಕೊಳ್ಳದೇ ಇದ್ದ. ಏನಾದರೂ ಈ ಬಗ್ಗೆ ಒಳಗೆ ಎದ್ದರೆ ಆರಾಮಾಗಿ ತಳ್ಳಿಹಾಕಿ ಬೇರೇನನ್ನೋ ಮನಸ್ಸಿನಂಗಳಕ್ಕೆ ಎಳೆದು ತರುತ್ತಿದ್ದ. ನಂತರ ಯಾವುದೋ ಒಂದು ದಿನ ಬೆಳಿಗ್ಗೆ ಏಳುವಾಗಲೇ ಆಳದಿಂದ ಎಲ್ಲವೂ ಮೈಮುರಿದು ಎದ್ದು ಬಂತು. ಇಡೀ ಘಟನೆ ವಿವರಗಳೊಂದಿಗೆ ಮೂಡಿ ಅಸಹ್ಯವೆನಿಸಲು ಮೊದಲಾಯಿತು. ಅವಳ ಬಾಯಿಯಿಂದ ಬರುತ್ತಿದ್ದ ಏನೋ ವಾಸನೆ. ಅವಳು ಮುಲುಗುತ್ತ ಬಾಯಿ ತೆರೆದಾಗ ಮೇಲಿನ ಹಲ್ಲು ಸಾಲಿನ ಸಂದಿ; ತುಟಿಯಂಚಿನಲ್ಲಿ ಬೆಳ್ಳಗಿನ ಬುರುಗಿನ ಥರದ ಎಂಜಲು; ಎಡಗೈ ಮೇಲೆ ಉಬ್ಬಿ ತೋರುತ್ತಿದ್ದ ನೀಲೀನರ; ಬೆಳ್ಳಗೆ ಬಿಳಿಚಿಕೊಂಡಂಥ ದೇಹ; ಅವಳ ಬಿಳೀ ತೊಡೆಗಳಲ್ಲಿ ಜಿನುಗಿದ ಬೆವರಿನಿಂದ ತನ್ನ ತೊಡೆಗಳು ಒದ್ದೆಯಾಗಿ ತೊಡೆಯ ಕೂದಲೆಲ್ಲ ಚರ್ಮಕ್ಕೆ ಅಂಟಿಕೊಂಡ ಭಾಸ. ಕಪ್ಪೆಯನ್ನ ಅಂಗಾತ ಮಲಗಿಸಿ, ಕೈಕಾಲಿಗೆ ಮೊಳೆ ಹೊಡೆದು ಡಿಸೆಕ್ಟ್ ಮಾಡುವಾಗಿನ ನೆನಪು. ಪುಟು ಪುಟು ಕುಣಿವ ಹೃದಯ, ಬಿಳೀ ಹೊಟ್ಟೆ ಕುಯ್ಯುವ ಕೈಗಳು.

ಇದರ ನಂತರ ರಾಮಚಂದ್ರ ಒಮ್ಮೆಗೇ ಬದಲಾಗಿ ಹೋದ. ಎಲ್ಲವೂ ಮತ್ತೆ ಮತ್ತೆ ನೆನಪಾದ ಹಾಗೆ. ಕಂಡರೇ ಅಸಹ್ಯವೆನ್ನಿಸುವ ಅವಳ ತುಟಿಗಳನ್ನು ತಾನು ಮುದ್ದಿಸಿದ ದೃಶ್ಯವೇ ಮೂಡಿ ಮೂಡಿ ಇರಿಯುತ್ತಿತ್ತು. ಅವಳು ಮಾತ್ರ ಏನೂ ನಡೆದೇ ಇಲ್ಲವೆನ್ನುವ ರೀತಿಯಲ್ಲಿ ನಡೆದುಕೊಂಡಳು. ಮೊದಮೊದಲು ಅವಳನ್ನೇ ನೋಡಲು ಕೂಡ ಭಯವೆನಿಸುತ್ತಿತ್ತು. ಆದರೆ ಅವಳು ಸಹಜವಾಗಿಯೇ ಓಡಾಡತೊಡಗಿದಾಗ ತಾನು ಅವಳನ್ನು ಬಲಾತ್ಕರಿಸಿದ್ದು ನಿಜವೇ, ಕನಸೇ, ಆದದ್ದು ಸ್ವಪ್ನಸ್ಖಲನವೇ ತಿಳಿಯದೇ ಭ್ರಮೆಯಲ್ಲಿ ಬಿದ್ದ. ಒಮ್ಮೊಮ್ಮೆ ಫ್ಯಾಕ್ಟರಿ ಕ್ಯಾಂಟೀನಿನಲ್ಲಿ ಚಹಾ ಕುಡಿಯುವಾಗ ತನ್ನ ತುಟಿಗಳು ಎಂಜಲಾಗಿವೆ ಎಂಬ ಅನಿಸಿಕೆಯೆದ್ದು ಪದೇ ಪದೇ ಬಾಯಿತೊಳಕೊಳ್ಳುತ್ತಿದ್ದ. ಅವಳನ್ನು ತಾನು ಬಲಾತ್ಕರಿಸಿದ್ದು ನಿಜ ಎಂದು ತನ್ನನ್ನೇ ನಂಬಿಸಿಕೊಳ್ಳಲು ಸುರುಮಾಡಿದ.

ಅವಳು ಬಸಿರಾಗದೇ ಹೋದರೆ ಏನು ಮಾಡುವುದು? ಈ ಅನುಮಾನ ಮೊಳಕೆಯೊಡೆದದ್ದೇ ತಡ ಕೂತಲ್ಲಿ ನಿಂತಲ್ಲಿ ರೇವತಿಯನ್ನ ಗಮನಿಸಲು ಪ್ರಾರಂಭಿಸಿದ. ಒಂದೂವರೆ ತಿಂಗಳಾಯಿತಲ್ಲ ಇನ್ನೂ ಆಗಲಿಲ್ಲವೇ ಎಂದೆಲ್ಲ ಯೋಚಿಸಿ, ಅವಳ ಹೊಟ್ಟೆಯನ್ನು ನೋಡುವುದೇ ಕೆಲಸವಾಯಿತು. ಅವಳು ತನ್ನ ಬಳಿ ಬಂದು ಬಸಿರಾಗಿದ್ದೇನೆ ಕೈ ಬಿಡಬೇಡಿ ಎಂದು ಗೋಳೋ ಅಳಬೇಕು. ಆಗ ತಾನು 'ನಿನ್ನಂತಹ ಎಷ್ಟೋ ಜನರಿದ್ದಾರೆ. ಎಲ್ಲರನ್ನೂ ಕೈ ಹಿಡಿಯುವುದು ಸಾಧ್ಯವೇ?' ಎಂದು ತಿರಸ್ಕರಿಸಬೇಕು ಮುಂತಾಗಿ ಕನಸು ಕಂಡ. ಕಂಡ ಕನಸನ್ನ ಅರಗಿಸಿಕೊಳ್ಳಲಾರದೇ ಒದ್ದಾಡಿದ. ಒಳಗಿನ ಯಾತನೆ ಏನೆನ್ನುವುದು ತಿಳಿಯದೇ ಕೂತಾಗ, ಕೂತರೆ ಸರಿಯಿಲ್ಲ ಅನ್ನಿಸಿ ನಿಂತು, ನಿಂತಾಗ ನಿಂತರೆ ಸರಿಯಿಲ್ಲ ಅನ್ನಿಸಿ ಕೂತು, ಮನೆಯೊಳಗೆ